# KARNATAKA LOKAYUKTA

No.UPLOK-2/DE/741/2016/ARE-11

Multi Storied Building,
Dr. B.R. Ambedkar Veedhi,
Bengaluru-560 001.
Dated 18.11.2021.

## RECOMMENDATION

Sub:- Departmental inquiry against Shri Gowrishankar, Forest Guard, Office of the Range Forest Officer, Madhugiri, Tumkur District - reg.

Ref:- 1) Government Order No.FEE 168 FDE 2016 dated 12.12.2016.

2) Nomination order No. UPLOK-2/DE/741/2016 dated 22.12.2016 of Upalokayukta, State of Karnataka.

3) Inquiry report dated 11.11.2021 of Additional Registrar of Enquiries-11, Karnataka Lokayukta, Bengaluru.

~~~~~

The Government by its order dated 12.12.2016 initiated the disciplinary proceedings against Shri Gowrishankar, Forest Guard, Office of the Range Forest Officer, Madhugiri, Tumkur District, [hereinafter referred to as Delinquent Government Official, for short as 'DGO' ] and entrusted the departmental inquiry to this Institution.
~~~~~

2. This Institution by Nomination Order No. UPLOK-2/DE/741/2016 dated 22.12.2016 nominated Additional Registrar of Enquiries-11, Karnataka Lokayukta, Bengaluru, as the Inquiry Officer to frame charges and to conduct departmental inquiry against DGO.

3. The DGO was tried for the charge of demanding bribe of Rs.200/- from the complainant for allowing him to transport firewood from the forest for his saw mill and thereby committed misconduct.

4. The Inquiry Officer (Additional Registrar of Enquiries-11) on proper appreciation of oral and documentary evidence has held that, the above charge against the DGO Shri Gowrishankar, Forest Guard, Office of the Range Forest Officer, Madhugiri, Tumkur District, is ' not proved'.

5. On re-consideration of report of inquiry and all other materials on record, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of

Enquiry Officer and exonerate DGO Shri Gowrishankar, Forest Guard, Office of the Range Forest Officer, Madhugiri, Tumkur District, of the charges leveled against him.

6. Action taken in the matter shall be intimated to this Authority.

Connected records are enclosed herewith.

18/11/21

(JUSTICE B.S.PATIL)
Upalokayukta,
State of Karnataka.

*BS**



4

**KARNATAKA LOKAYUKTA**

NO.UPLOK-2/DE/741/2016/ARE-11

M.S.Building,
Dr. B.R. Ambedkar Veedhi,
Bengaluru-560 001,
Date: 11/11/2021.

**:: E N Q U I R Y   R E P O R T ::**

Sub: Departmental Enquiry against:
Sri Gowrishankar, Forest Guard, Office of the Range Forest Officer, Madhugiri, Tumkur District -reg.

1. Government Order No. ಅಪಜೀ 168 ಅಇಐ 2016 Bengaluru, dated 12/12/2016.
2. Nomination Order No. UPLOK-2/DE/741/2016, Bengaluru, dated 22/12/2016.

*****

1. The Departmental Enquiry is against Gowrishankar, Forest Guard, Office of the Range Forest Officer, Madhugiri, Tumkur District (hereinafter referred to as the Delinquent Government Official, in short ).

2. In view of Government Order cited at reference No.1, the Hon'ble Upalokayukta vide order cited at reference No.2, has nominated Additional Registrar (Enquiries-11)

11/11/21

5

to frame Articles of Charge and to conduct enquiry against aforesaid DGO.

3. The complainant, Shri. Baba Fakruddin Beg. of Madhugiri, lodged complaint dated 12/05/2014 before Lokayukta Police Station that the DGO, T.D. Gowrishankar, working as Forest Guard, has demanded bribe of Rs.2,000/- on 09/05/2014 from the complainant, to permit him to transport wood, to and from his saw mill. He has recorded the same in voice recorder. The Police laid the trap on 12/05/2014, but the DGO was not available. On 13/05/2014 too, the DGO was not available. On 21/05/2014, the DGO demanded bribe and on 22/05/2014 did not accept the amount. The Police filed charge sheet against the DGO for demanding bribe.

4. Hon'ble Upalokayukta took up suo motu investigation u/s 7(2) of the Karnataka Lokayukta Act, 1984, against the DGO. On perusal of complaint, mahazars, FSL report dated 26/06/2014, and other documents a prima-facie case was found, and Hon'ble Upalokayukta forwarded Report dated 31/08/2016 u/s 12(3) of Karnataka Lokayukta Act, 1984, to initiate disciplinary proceedings against the D.G.O. The Government by its Order dated 22/12/2016 entrusted the matter to Hon'ble Upalokayukta.

11/11/24

5. On 22/12/2016, Hon'ble Upalokayukta nominated this Additional Registrar, (Enquiries), to conduct the enquiry. Notice of Articles of charge, details of charge i.e., substance of imputations of misconduct with list of witnesses and documents was served upon the D.G.O. The D.G.O. denied the charges and claimed to be enquired. The DGO has shown his date of retirement as 31/10/2047 in his First Oral Statement.

6. The Articles of charge framed is as follows:

**ಅನುಬಂಧ-1**

**ದೋಷಾರೋಪಣೆ**

ಆಪಾದಿತ ಸರ್ಕಾರಿ ನೌಕರರಾದ ನೀವು ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ವಲಯ ಅರಣ್ಯಾಧಿಕಾರಿಯವರ ಕಛೇರಿಯಲ್ಲಿ ಅರಣ್ಯ ರಕ್ಷಕನಾಗಿ 2014ನೇ ಇಸವಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಮಧುಗಿರಿ ಪಟ್ಟಣದ 2ನೇ ಬ್ಲಾಕ್‌ನ ಕೊತ್ವಾಲ್ ಸ್ಟ್ರೀಟ್‌ನಲ್ಲಿ ವಾಸವಿರುವ ಇಸ್ಮಾಯಿಲ್ ಬೇಗ್ ರವರ ಮಗನಾದ ಫಿರ್ಯಾದಿದಾರರಾದ ಬಾಬಾ ಫಕ್ರುದ್ದೀನ್‌ಬೇಗ್ (ಬಾಬು) ರವರು ನಿಯಮಾನುಸಾರ ಪರವಾನಗಿ ಪಡೆದುಕೊಂಡು ಸುಮಾರು 15 ವರ್ಷಗಳಿಂದ ಮರ ಸಿಗಿಯುವ ಗಿರಣಿಯಲ್ಲಿ ನಡೆಸಿಕೊಂಡು ಬಂದಿದ್ದು, ಸದರಿ ಸ್ಥಾವರಕ್ಕೆ ಸಂಬಂಧಿಸಿದಂತೆ ಸೌದೆ, ಮರಮುಟ್ಟು ಇತ್ಯಾದಿಗಳನ್ನು ತರುವ ಸಂಬಂಧ ಒಂದು ಟ್ರಾಕ್ಟರ್ ಇಟ್ಟುಕೊಂಡಿದ್ದು, ಈ ಸಂಬಂಧ ನೀವು ಲಂಚದ ರೂಪದಲ್ಲಿ ರೂ.200/- ಕೊಡಲು ಕೇಳಿದ್ದು, ಅ ಸಂಬಂಧವಾಗಿ ಫಿರ್ಯಾದಿಯು ತುಮಕೂರು ಲೋಕಾಯುಕ್ತ ಪೋಲೀಸ್ ಠಾಣೆಗೆ ಹೋಗಿ ವಿಷಯ ತಿಳಿಸಿದ್ದು ತರುವಾಯ ಒಂದು ಧ್ವನಿಮುದ್ರಕವನ್ನು ಪಡೆದುಕೊಂಡು ನಿಮ್ಮ ಬಳಿ ದಿನಾಂಕ 09-05-2014ರಂದು ಬಂದು ನಿಮ್ಮ ಮತ್ತು ತಮ್ಮ ನಡುವೆ ನಡೆದ ಮಾತುಕತೆಗಳನ್ನು ಧ್ವನಿಮುದ್ರಿಸಿಕೊಂಡು ದಿನಾಂಕ 12-05-2014ರಂದು ತುಮಕೂರಿನ ಲೋಕಾಯುಕ್ತ ಆರಕ್ಷಕ ಠಾಣೆಯಲ್ಲಿ ನಿಮ್ಮ ದೂರು ಸಲ್ಲಿಸಿದ್ದು, ಆ ದೂರಿನ ಆಧಾರದ

11/11/21

6

ಮೇಲೆ ತುಮಕೂರು ಲೋಕಾಯುಕ್ತ ಆರಕ್ಷಕ ಠಾಣೆಯಲ್ಲಿ ಅಪರಾಧ ಸಂಖ್ಯೆ:11/2014ರಲ್ಲಿ ನಿಮ್ಮ ವಿರುದ್ದ ಲಂಚ ಪ್ರತಿಬಂಧಕ ಕಾಯ್ದೆ ವಿಧಿ 7ರಡಿಯಲ್ಲಿ ಪ್ರಕರಣ ದಾಖಲಾಗಿದ್ದು ತರುವಾಯ ದಿನಾಂಕ 12-05-2014ರಂದು ನೀವು 13-05-2014ರಂದು ಭೇಟಿಯಾಗುವಂತೆ ಫಿರ್ಯಾದಿಗೆ ತಿಳಿಸಿ ದಿನಾಂಕ 13-05-2014ರಂದು ಮತ್ತೆ ಪುನ: ನಿಮ್ಮನ್ನು ಫಿರ್ಯಾದಿಯು ಮೊಬೈಲ್ ಮುಖಾಂತರ ಸಂಪರ್ಕಿಸಿದಾಗ ಹಣ ಪಡೆಯುವ ಸಲುವಾಗಿ ತುಮಕೂರು ಗೇಟ್ ಬಳಿ ಇರುವ ವೃತ್ತಕ್ಕೆ ಬರುವುದಾಗಿ ನೀವು ತಿಳಿಸಿದ್ದು ನಂತರ ಅದೇ ದಿನ ಮದ್ಯಾಹ್ನ ನೀವು ಮೇಲ್ಕಂಡ ಮರ ಸಿಗಿಯುವ ಗಿರಣಿಗೆ ಬರುವುದಾಗಿ ಹೇಳಿದ್ದು ಮತ್ತೆ 22-05-2014ರಂದು ಮೇಲ್ಕಂಡ ಮರ ಸಿಗಿಯುವ ಗಿರಣಿಯ ಬಳಿ ಲಂಚದ ಹಣವನ್ನು ಕೊಡುವಂತೆ ನೀವು ಫಿರ್ಯಾದಿಗೆ ಕೇಳಿದ್ದು ಆ ರೀತಿಯಾಗಿ ನೀವು ಫಿರ್ಯಾದಿಯಿಂದ ರೂ.2,000/-ಗಳನ್ನು ಲಂಚಕ್ಕೆ ಒತ್ತಾಯಿಸುವುದರ ಮೂಲಕ ಕರ್ತವ್ಯಲೋಪ ಎಸಗಿ ಸರ್ಕಾರಿ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ, ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (i) ರಿಂದ (iii)ರಡಿಯಲ್ಲಿ ದುರ್ನಡತೆ ಎಸಗಿದ್ದೀರಿ.

7. The statement of imputations of misconduct as framed is as follows:

ಅನುಬಂಧ-2

ದೋಷಾರೋಪಣೆಯ ವಿವರ

ತುಮಕೂರು ಜಿಲ್ಲೆಯ ಮಧುಗಿರಿ ಟೌನಿನಲ್ಲಿ 15 ವರ್ಷಗಳಿಂದ ಸಾಮಿಲ್ ಇಟ್ಟುಕೊಂಡು ಜೀವನ ಸಾಗಿಸುತ್ತಿರುವ ಬಾಬಾ ಫಕೃದ್ದೀನ್ ರವರು ಸೌದೆ, ಮರ, ಮುಟ್ಟು ಇತ್ಯಾದಿಗಳನ್ನು ತರಲು ಒಂದು ಟ್ರಾಕ್ಟರ್ ಸಹ ಇಟ್ಟುಕೊಂಡಿದ್ದು, ಈ ಸಂಬಂಧ ಅರಣ್ಯ ರಕ್ಷಕರಾದ ಗೌರಿಶಂಕರ್ ರವರು ಸುಮಾರು ನಾಲ್ಕು ವರ್ಷಗಳಿಂದ ನನಗೆ ಏನು ಕೊಟ್ಟಿಲ್ಲ ನನಗೆ ರೂ.200/- ಕೊಡು ಎಂದು ಒತ್ತಾಯಿಸಿದಾಗ ಫಿರ್ಯಾದಿದಾರರು ರೂ.200/- ಕೊಡಲು ಇಷ್ಟವಿಲ್ಲದ ಕಾರಣ ತುಮಕೂರು

ಲೋಕಾಯುಕ್ತ ಪೊಲೀಸ್ ಕಛೇರಿಗೆ ದೂರು ನೀಡಲು ಹೋಗಿದ್ದು, ತನಿಖಾಧಿಕಾರಿಯವರಿಂದ ಒಂದು ವಾಯ್ಸ್ ರೆಕಾರ್ಡ್ ಅನ್ನು ಪಡೆದುಕೊಂಡು ಆಪಾದಿತರಾದ ನಿಮ್ಮನ್ನು ದಿನಾಂಕ 09-05-2014ರಂದು ಭೇಟಿ ಮಾಡಿ ನಡೆದ ಮಾತುಕತೆಗಳನ್ನು ಧ್ವನಿಮುದ್ರಿಸಿಕೊಂಡು ಲಂಚ ಕೊಡಲು ಇಷ್ಟವಿಲ್ಲದ ಕಾರಣ, ತುಮಕೂರು ಲೋಕಾಯುಕ್ತ ಪೊಲೀಸರನ್ನು ದಿನಾಂಕ 12-05-2014ರಂದು ಭೇಟಿ ಮಾಡಿ ದೂರನ್ನು ಸಲ್ಲಿಸಿರುತ್ತಾರೆ.

ದೂರುದಾರರು ಸಲ್ಲಿಸಿದ ದೂರನ್ನು ಲೋಕಾಯುಕ್ತ ಪೊಲೀಸರು ತುಮಕೂರು ಲೋಕಾಯುಕ್ತ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ.11/2014 ಕಲಂ 7, ಪಿಸಿ ಕಾಯಿದೆ 1988ರಡಿಯಲ್ಲಿ ನೊಂದಾಯಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಸಂಬಂಧಪಟ್ಟ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

ದೂರು ದಾಖಲಾದ ಬಳಿಕ ತನಿಖಾಧಿಕಾರಿಯವರು ಇಬ್ಬರು ಪಂಚರನ್ನು ಬರಮಾಡಿಕೊಂಡು ದೂರುದಾರರಿಗೆ ಪರಿಚಯ ಮಾಡಿಕೊಟ್ಟು, ದೂರಿನ ಸಾರಾಂಶವನ್ನು ತಿಳಿಸಿ ಪಂಚರ ಸಮಕ್ಷಮ ದೂರುದಾರರು ಒಂದು ಸಾವಿರ ಮುಖಬೆಲೆಯುಳ್ಳ ಒಂದು ನೋಟು ಮತ್ತು ರೂಪಾಯಿ ಐದು ನೂರು ಮುಖಬೆಲೆಯ ಎರಡು ನೋಟುಗಳನ್ನು ಹಾಜರುಪಡಿಸಿದ್ದು, ನೋಟಿನ ಸಂಖ್ಯೆಗಳನ್ನು ಒಂದು ಬಿಳಿ ಹಾಳೆಯ ಮೇಲೆ ಬರೆದುಕೊಂಡಿದ್ದು, ನಂತರ ಪಂಚರ ಸಮಕ್ಷಮ ಪ್ರಾಯೋಗಿಕ ಪಂಚನಾಮೆಯನ್ನು ಸಿದ್ದಪಡಿಸಿ ಆಪಾದಿತರನ್ನು ಟ್ರ್ಯಾಪ್ ಮಾಡಲು ಮಧ್ಯಾಹ್ನ 4-20 ಗಂಟೆಗೆ ಕಛೇರಿಯನ್ನು ಬಿಟ್ಟು ಸಂಜೆ ಸುಮಾರು 5-15 ಗಂಟೆಗೆ ಮಧುಗಿರಿ ತಲುಪಿ ಫಿರ್ಯಾದಿದಾರರಿಂದ ನಿಮಗೆ ಮೊಬೈಲ್‌ನಿಂದ ಕರೆ ಮಾಡಿಸಿದಾಗ ನೀವು ಕರ್ತವ್ಯದ ನಿಮಿತ್ತ ತುಮಕೂರಿಗೆ ಹೋಗಿರುವುದಾಗಿ ದಿನಾಂಕ 13-05-2014ರಂದು ಭೇಟಿ ಮಾಡಲು ತಿಳಿಸಿರುವುದಾಗಿ ಫಿರ್ಯಾಧಿದಾರರು ತಿಳಿಸಿದ ಮೇರೆಗೆ ದಿನಾಂಕ 13-05-2014ರಂದು ಮತ್ತೆ ಪ್ರಾಯೋಗಿಕ ಪಂಚನಾಮೆಯ ಎಲ್ಲಾ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಬೆಳಿಗ್ಗೆ 11-00 ಗಂಟೆಗೆ ಮಧುಗಿರಿಯನ್ನು ತಲುಪಿ, ಫಿರ್ಯಾದಿದಾರರಿಂದ

11/11/21

ಆಪಾದಿತರಾದ ನಿಮಗೆ ಮೊಬೈಲ್‌ನಲ್ಲಿ ಕರೆ ಮಾಡಿಸಿದಾಗ ನೀವು ತುಮಕೂರು ಗೇಟ್ ಬಳಿ ಇರುವ ಸರ್ಕಲ್ ಬಳಿ ಬರುವುದಾಗಿ ಹೇಳಿದ್ದು, ಅದರಂತೆ ಟ್ರ್ಯಾಪ್ ತಂಡವು ಸರ್ಕಲ್ ಬಳಿ ಬಂದಾಗ ಆಪಾದಿತರಾದ ನೀವು ಸರ್ಕಲ್ ಬಳಿ ಬಾರದಿರುವುದರಿಂದ ಮತ್ತೆ ಫಿರ್ಯಾದಿದಾರರಿಂದ ಮೊಬೈಲ್ ಕರೆ ಮಾಡಿಸಿದಾಗ ಆಪಾದಿತರಾದ ನೀವು ಮದ್ಯಾಹ್ನ ಫಿರ್ಯಾದಿದಾರರ ಸಾಮಿಲ್ ಬಳಿ ಬರುವುದಾಗಿ ತಿಳಿಸಿದ್ದು, ಅದರಂತೆ ಫಿರ್ಯಾದಿದಾರರ ಸಾಮಿಲ್ ಬಳಿ ಕಾಯುತ್ತಿದ್ದು, ಆಪಾದಿತರಾದ ನೀವು ಬಾರದಿರುವುದರಿಂದ ಮತ್ತೆ ಫಿರ್ಯಾದಿದಾರರಿಂದ ಮೊಬೈಲ್ ಕರೆ ಮಾಡಿಸಿದಾಗ ಆಪಾದಿತರಾದ ನೀವು ಬ್ಯಾಲ್ಯದಲ್ಲಿ ಗ್ರಾಮದಲ್ಲಿದ್ದು ಬೇರೆ ಯಾರಿಗಾದರೂ ಹಣ ಕೊಡು ನಾನು ಅವರಿಂದ ಪಡೆದುಕೊಳ್ಳುತ್ತೇನೆ ಈಗ ಬರಲು ಸಾಧ್ಯವಿಲ್ಲ ಬಂದ ದಿನ ಹಣ ಕೊಡುವಂತೆ ತಿಳಿಸಿದ್ದ ಮೇರೆಗೆ ಕಛೇರಿಗೆ ವಾಪಸ್ಸು ಬಂದಿದ್ದು, ದಿನಾಂಕ 22-05-2014ರಂದು ಮತ್ತೆ ಪ್ರಾಯೋಗಿಕ ಪಂಚನಾಮೆ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಫಿರ್ಯಾದಿದಾರರ ಸಾಮಿಲ್ ಬಳಿ ಬೆಳಿಗ್ಗೆ 11-10 ಗಂಟೆಯ ಸಮಯದಲ್ಲಿ ಕಾಯುತ್ತಿದ್ದು, ಬೆಳಿಗ್ಗೆ 11-40 ಗಂಟೆಗೆ ಫಿರ್ಯಾದಿದಾರರು ತನ್ನ ಜೊತೆ ಬೇರೊಬ್ಬ ವ್ಯಕ್ತಿ ಇರುವುದನ್ನು ಕಂಡ ಆಪಾದಿತರು ಮದ್ಯಾಹ್ನ 3-00 ಗಂಟೆಗೆ ಬಂದು ಹಣ ಪಡೆಯುವುದಾಗಿ ಹೇಳಿ ದ್ವಿಚಕ್ರ ವಾಹನದಲ್ಲಿ ಹೊರಟು ಹೋದರು ಎಂದು ತಿಳಿಸಿದ್ದರ ಮೇರೆಗೆ ಮದ್ಯಾಹ್ನ 3-00 ಗಂಟೆಗೆ ಫಿರ್ಯಾದಿದಾರರು ಆಪಾದಿತರಾದ ನಿಮಗೆ ಮೊಬೈಲ್‌ನಲ್ಲಿ ಕರೆ ಮಾಡಿದಾಗ ಆಪಾದಿತರಾದ ನೀವು ಯಾವ ಉದ್ದೇಶಕ್ಕಾಗಿ ಮತ್ತು ಕಾರಣಕ್ಕಾಗಿ ಹಣ ಕೊಡುತ್ತಿದ್ದೀಯಾ ಎಂದು ಸ್ಥಳಕ್ಕೆ ಬರಲು ನಿರಾಕರಿಸಿದರು ಎಂದು ತಿಳಿಸಿರುತ್ತಾರೆ ಎಂದು ಫಿರ್ಯಾದಿ ಹೇಳಿದರು. ಈ ಸಂಬಂಧ ತನಿಖಾಧಿಕಾರಿಯವರು ಮದ್ಯಾಹ್ನ 3-40 ಗಂಟೆಗೆ ಆಪಾದಿತ ನೌಕರರ ಮೇಲಧಿಕಾರಿಯವರ ಕಛೇರಿಗೆ ಭೇಟಿ ನೀಡಿ ಕಛೇರಿಯಲ್ಲಿದ್ದ ಸುಬ್ಬಮ್ಮರವರಿಗೆ ಮಾಹಿತಿ ನೀಡಿ ದಿನಾಂಕ 23-05-2014ರಂದು ವಿಚಾರಣೆಗೆಂದು ತುಮಕೂರು ಲೋಕಾಯುಕ್ತ ಕಛೇರಿಗೆ ಬರಲು ತಿಳಿಸಿ ಕಛೇರಿಗೆ ವಾಪಸ್ಸಾಗಿರುತ್ತಾರೆ. ದಿನಾಂಕ 23-05-2014ರಂದು ಆಪಾದಿತರಾದ ನೀವು ಫಿರ್ಯಾದಿದಾರರಿಂದ ರೂ.2,000/-ಗಳ ಲಂಚದ ಹಣಕ್ಕಾಗಿ ಒತ್ತಾಯಿಸಿರುವ ಬಗ್ಗೆ ಆಪಾದಿತ ಸರ್ಕಾರಿ ನೌಕರರಾದ ನಿಮ್ಮ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

11/11/21

ತನಿಖಾಧಿಕಾರಿಯವರು ತನಿಖಾ ಕಾಲದಲ್ಲಿ ವಶಪಡಿಸಿಕೊಂಡ ಎಲ್ಲಾ ದಾಖಲಾತಿಗಳ ಪ್ರಕಾರ ಆಪಾದಿತರು ದೂರುದಾರರಿಂದ ರೂ.2,000/– ಲಂಚದ ಹಣಕ್ಕಾಗಿ ಒತ್ತಾಯಿಸುವುದರ ಮೂಲಕ ಕರ್ತವ್ಯಲೋಪ ಎಸಗಿ, ಸರ್ಕಾರಿ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (i) ರಿಂದ (iii)ರಡಿಯಲ್ಲಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ.

ಸದರಿ ದೂರಿಗೆ ಸಂಬಂಧಿಸಿದಂತೆ ಆಪಾದಿತರಿಗೆ ಪರಿಶೀಲನಾ ಟಿಪ್ಪಣಿಯನ್ನು ಕಳುಹಿಸಿ, ಉತ್ತರವನ್ನು ಸಲ್ಲಿಸುವಂತೆ ಸೂಚಿಸಿದ್ದು, ಅದರಂತೆ ಆಪಾದಿತರು ಉತ್ತರವನ್ನು ಸಲ್ಲಿಸಿದ್ದು, ಸದರಿ ಉತ್ತರವನ್ನು ಒಪ್ಪಲು ಬಾರದ ಕಾರಣ, ಆಪಾದಿತರ ಸಕ್ಷಮ ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರಡಿಯಲ್ಲಿ ವರದಿಯನ್ನು ಸಲ್ಲಿಸಿ, ಆಪಾದಿತರ ವಿರುದ್ಧ ಶಿಸ್ತು ಕ್ರಮವನ್ನು ಜರುಗಿಸಲು ತಿಳಿಸಲಾಗಿತ್ತು. ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಯಿಂದ ಮಾಡಿರುವ ಶಿಫಾರಸ್ಸನ್ನು ಒಪ್ಪಿ ಆಪಾದಿತರ ವಿರುದ್ಧ ಶಿಸ್ತು ಕ್ರಮಕೈಗೊಂಡು ವರದಿಯನ್ನು ಸಲ್ಲಿಸುವಂತೆ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಲಾಗಿರುತ್ತದೆ. ಆದ್ದರಿಂದ ತಮ್ಮ ಮೇಲೆ ಈ ದೋಷಾರೋಪಣೆ.

8. The D.G.O. filed written statement on 28/08/2017, denying the demand of bribe, and has prayed to exonerate him.

9. The points that arise for consideration are as follows:

**(1) Whether the disciplinary authority proves that the D.G.O. demanded bribe of Rs.2,000/- on 09/05/2014, 21/05/2014 and 22/05/2014 for**

11/11/24

8

**permitting complainant to transport wood, to and from complainant's saw mill in Mudhugiri and thereby, has committed, misconduct, dereliction of duty, acted in a manner unbecoming of a Government Servant and not maintained absolute integrity, violating Rule 3(1) (i) to (iii) of K.C.S. (Conduct) Rules, 1966?**

**(2) What findings?**

10. (a) The disciplinary authority has examined 3 witnesses and got 18 documents exhibited.

(b) The D.G.O has not lead any evidence.

11. Heard Learned Presenting Officer and perused written arguments of DGO and all documents.

12. The answers to the above points are:

(1) In the Negative

(2) As per final findings, for the following.

**<u>R E A S O N S</u>**

13. (a) **<u>Point No.1</u>**:- Complainant/P.W.1 has deposed in his evidence that he is owner of Baba Fakruddin saw mill in Madhugiri. The DGO was demanding bribe of Rs.2,000/- for permitting him to transport wood to and from his saw mill. He

11/11/21

therefore, went to Lokayukta Police station, Tumkur on 08/05/2014 and informed the police about the same. The police gave him voice recorder to get the conversation recorded. On 09/05/2014, the DGO in the morning, came to saw mill of P.W.1 and demanded money. P.W.1 got the same recorded and there was holiday on 10/05/2014 and 11/05/2014, P.W.1 gave written complaint on 12/05/2014 and the voice recorder to the Police. P.W.1 has got xerox copy of his complaint, marked as Ex.P1. P.W.1 gave 1 note of Rs.1,000/- and 2 notes of Rs.500/- each to the Police to lay trap. The Police prepared the list of currency notes, which is marked as Ex.P2. Phenolphthalein powder was applied to the currency notes and it was kept in his left side shirt pocket. The hands of Shivanna, Rajanna and Murthy were washed in solution. The solution turned to pink colour. The Police drew pre-trap mahazar. P.W.1 has identified the same, and got it marked as Ex.P3. All of them left to Madhugiri. On contacting DGO, DGO told P.W.1 that he is in Tumkur with some work,. Therefore, all of them returned to Tumkur, and P.W.1 returned the said money, and police drew panchama, which is got marked as Ex.P4.

(b) Next day, i.e., on 13/05/2014, the same pre-trap procedure was followed. The same is got marked as Ex.P5. All of them waited near saw mill of P.W.1 upto 3 p.m. The DGO said that, he will come some other day. So the team returned and return panchanama Ex P6 was drawn.

11/11/21

(c) P.W.1 further states that on 21/05/2014, the DGO came to P.W.1, and asked for money. P.W.1 told him that, he will pay him the next day. So on 22/05/2014, again pre-trap procedure was followed, Ex.P7. The DGO at about 12.00 p.m. came to the saw mill of P.W.1. However, on seeing panch witness, Rajanna, he got suspicious, and went away on his motorcycle without receiving it. The Police drew return panchanma, Ex.P8. After about 3 months, P.W.1 took the money back, from the police.

(d) In cross-examination, P.W.1 has stated that the conversation he recorded on 09/05/2014, was at 9.00 a.m.

14. (a) P.W.2, panch witness, Rajanna has stated that pre-trap and return on 12/05/2014, 13/05/2014 and 22/05/2014. He has further stated that on 23/05/2014, he and another witness Shri. B.S.Murthy went to Lokayukta Police station. The RFO of Madhugiri, Shri.M.Shivanna was there. The C.D. containing conversation was played and Shri. M. Shivanna identified the voice of DGO. The Police drew panchanama to that effect, Ex.P9. The DGO was also present. His specimen voice and statement was taken. Relating to having taken specimen voice, panchanama was drawn. The said panchanama is got marked as Ex.P10 and statement of DGO, Ex.P11.

(b) In cross examination, P.W.2 has denied the suggestions put by learned Advocate for DGO that no such above incidents had occurred.

11/11/21

15. (a) P.W.3/I.O., Shri. M.P.Gangalingaiah has got copies of FIR, transcriptions of conversation on 22/05/2014 and 09/05/2014 marked as Ex.P12 to 14 and Ex.P16 respectively. Copy of report of Truth lab dated 26/06/2014 is got marked as Ex.P15. The report is given that the voice characteristics of the speaker matches with the recording. Phone call details of P.W.1 and DGO are got marked as Ex.P17 and Ex.P18 respectively.

(b) The DGO has not cross examined P.W.3.

16. From above evidence, it is seen that the trap has failed on 09/05/2014, 13/05/2014 and 22/05/2014. It did not succeed even later. Though, recording of conversation was done on 09/05/21014, the voice recorder was given by P.W.1 to Police on 12/05/2014. P.W.1 has stated that that the delay was because 10th and 11th were holydays. This explanation cannot be accepted, as police station will not be closed on holidays and P.W.1 had to immediately give the recorder to Police on 09/05/2014 itself. Even on 22/05/2014, P.W.1 and 2 have not stated in their evidence that DGO demanded money. By all this, the demand of money by DGO does not stand proved. Only FSL report, which is marked as

11/11/24

10

Ex.P15, cannot prove demand of bribe, when there is no corroborative evidence.

17. (a) The DGO has produced copy of Judgment dated 23/09/2017 in Spl. case No.43/2015, wherein, he has been acquitted, as the same is not proved beyond reasonable doubt. Learned Advocate for DGO has relied upon 3 decisions:

(i)ILR 2013 Kar 4737, between Smt. K.Chandrika V/s CBI.

(ii )(2014) 13 SCC 143, between Satvir Singh V/s State of Delhi and

(iii) 2012 Supreme (Kar) 60 between R.Malini V/s State of Karnataka.

However, these decisions speak about demand and acceptance, and in case herein, acceptance is not involved. Hence, these decisions are not applicable to facts and circumstances of this case.

18. This Additional Registrar (Enquiries) finds that the disciplinary authority has not proved the charges against the DGO. Accordingly, this point is answered in the **Negative**.

11/11/21

NO. UPLOK-2/DE/741/2016/ARE-11

19. **Point No.2:-** For the aforesaid reasons this Additional Registrar (Enquiries) proceeds to record the following:

**FINDINGS**

The disciplinary authority has not proved the charges against the DGO.

Submitted to Hon'ble Upalokayukta for kind approval, and necessary action in the matter.

11/11/21

**(SACHIN KAUSHIK R.N.)**
I/c Additional Registrar (Enquiries-11),
Karnataka Lokayukta,
Bangalore.

ANNEXURE

List of witnesses examined on behalf of the Disciplinary Authority:-

| | |
|---|---|
| PW1:- | Sri. Baba Fakruddin Beg. |
| PW2:- | Sri. Rajanna Rao. H.R. |
| PW3:- | Sri. M.P.Gangalingiah. |

List of witnesses examined on behalf of Defence:- Nil

List of documents marked on behalf of Disciplinary Authority:-Nil.

| | |
|---|---|
| Ex P1 | Certified copy of complaint dated 12/05/2014. |
| Ex P2 | Certified copy of list of currency notes. |
| Ex P3 | Certified copy of pre-trap |

11/11/21

| | |
|---|---|
| | panchanama dated 12/05/2014. |
| Ex P4 | Certified copy of panchanama dated 12/05/2014 |
| Ex P 5 | Certified copy of panchanama dated 13/05/2014 |
| Ex P6 | Certified copy of panchanama dated13/05/2014 |
| Ex P7 | Certified copy of panchanama dated 22/05/2012. |
| Ex P8 | Certified copy of panchanama dated 22/05/2014 |
| Ex P9 | Certified copy of panchanama dated 23/05/2014 |
| Ex P10 | Certified copy of panchanama dated 23/05/2014 |
| Ex P11 | Certified copy of statement of DGO. |
| Ex P12 | Certified copy of FIR Cr.No.11/2014. |
| Ex P13 | Certified copy of conversation between complainant and DGO dated 09/05/2014. |
| Ex P14 | Certified copy of details of conversation of DGO and complainant dated 09/05/2014. |
| Ex P15 | Certified copy report of Truth Foundation dated 17/06/2014. |
| Ex P16 | Certified copy of conversation between DGO and complainant. |
| Ex P17 | Certified copy of call details related to DGO |
| Ex P18 | Certified copy of call details related to DGO. |

List of documents marked on behalf of Defence:- Nil

11/11/21

**(SACHIN KAUSHIK R.N.)**
I/c Additional Registrar (Enquiries-11),
Karnataka Lokayukta,
Bangalore.

# ಕರ್ನಾಟಕ ಸರ್ಕಾರ

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ/156/2022/ಎ.ಆರ್.ಇ-11

ಬಹುಮಹಡಿಗಳ ಕಟ್ಟಡ,
ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು-560001.
ದಿನಾಂಕ: 03ನೇ ಜುಲೈ 2023.

## -:: ಶಿಫಾರಸು ::-

ವಿಷಯ: ಆಪಾದಿತ ಸರ್ಕಾರಿ ನೌಕರರಾದ ಶ್ರೀ ಸಣ್ಣ ಮಾರೆಣ್ಣ, ಗ್ರಾಮಲೆಕ್ಕಿಗರು, ಯರ್ರಯ್ಯನಹಳ್ಳಿ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ ರವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

ಉಲ್ಲೇಖ: (1) ಸರ್ಕಾರಿ ಆದೇಶ ಸಂಖ್ಯೆ:ಕಂಇ 33 ಬಿಡಿಪಿ 2022, ಬೆಂಗಳೂರು, ದಿನಾಂಕ: 28/06/2022.
(2) ಉಪಲೋಕಾಯುಕ್ತ, ಕರ್ನಾಟಕ ರಾಜ್ಯ, ಬೆಂಗಳೂರು ರವರ ನಾಮನಿರ್ದೇಶನ ಆದೇಶ ಸಂಖ್ಯೆ:ಉಪಲೋಕ್-2/ಡಿಇ/156/2022, ಬೆಂಗಳೂರು, ದಿನಾಂಕ: 08/07/2022.
(3) ಅಪರ ನಿಬಂಧಕರು ವಿಚಾರಣೆಗಳು-11, ಕರ್ನಾಟಕ ಲೋಕಾಯುಕ್ತ ಬೆಂಗಳೂರು ರವರ ವಿಚಾರಣಾ ವರದಿ ದಿನಾಂಕ: 27/06/2023.

*****

ಸರ್ಕಾರದ ಆದೇಶ ದಿನಾಂಕ: 28/06/2022 ರಂತೆ ಶ್ರೀ ಸಣ್ಣ ಮಾರೆಣ್ಣ, ಗ್ರಾಮಲೆಕ್ಕಿಗರು, ಯರ್ರಯ್ಯನಹಳ್ಳಿ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ (ಇನ್ನು ಮುಂದೆ ಆಪಾದಿತ ಸರ್ಕಾರಿ ನೌಕರರು ಅಂದರೆ ಚಿಕ್ಕದಾಗಿ 'ಆ.ಸ.ನೌಕರರು' ಎಂದು

ಸಂಭೋದಿಸಲಾಗುವುದು) ರವರ ವಿರುದ್ಧ ಶಿಸ್ತು ಪ್ರಕ್ರಿಯೆಯನ್ನು ಕೈಗೊಂಡು ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಈ ಸಂಸ್ಥೆಗೆ ಇಲಾಖಾ ವಿಚಾರಣೆಯನ್ನು ವಹಿಸಿರುತ್ತದೆ.

2. ಈ ಸಂಸ್ಥೆಯ ನಾಮನಿರ್ದೇಶನ ಆದೇಶ ಸಂಖ್ಯೆ:ಉಪಲೋಕ್-2/ಡಿಇ/156/2022, ಬೆಂಗಳೂರು, ದಿನಾಂಕ: 08/07/2022ರ ರೀತ್ಯಾ ಅಪರ ನಿಬಂಧಕರು ವಿಚಾರಣೆಗಳು-11 ರವರಿಗೆ ಆ.ಸ.ನೌಕರರ ವಿರುದ್ಧ ದೋಷಾರೋಪಣಾ ಪಟ್ಟಿ ತಯಾರು ಮಾಡಿ, ವಿಚಾರಣೆ ನಡೆಸಿ, ವರದಿ ಸಲ್ಲಿಸುವಂತೆ ಆದೇಶ ಹೊರಡಿಸಲಾಗಿರುತ್ತದೆ.

3. ಆ.ಸ.ನೌಕರರಾದ ಶ್ರೀ ಸಣ್ಣ ಮಾರೆಣ್ಣ, ಗ್ರಾಮಲೆಕ್ಕಿಗರು, ಯರ್ರಯ್ಯನಹಳ್ಳಿ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ ರವರ ವಿರುದ್ಧ ಈ ಕೆಳಗಿನ ದೋಷಾರೋಪಣೆಗಾಗಿ ಇಲಾಖಾ ವಿಚಾರಣೆಯನ್ನು ನಡೆಸಲಾಯಿತು.

<u>ಅನುಬಂಧ-1</u>

<u>ದೋಷಾರೋಪಣೆ</u>

ಆಪಾದಿತ ಸರ್ಕಾರಿ ನೌಕರರಾದ ಶ್ರೀ.ಸಣ್ಣ ಮಾರೆಣ್ಣ, ಆದ ನೀವು ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆಯ ಯರ್ರಯ್ಯನಹಳ್ಳಿ, ಗ್ರಾಮ ಲೆಕ್ಕಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿಕೊಂಡಿದ್ದ ಅವಧಿಯಲ್ಲಿ ದೂರುದಾರರಾದ ಶ್ರೀ ಭೀಮರಾಜ ಬಿನ್ ಕನಕಾಪುರ ಸಣ್ಣ ಭೋರಪ್ಪ, ಯರ್ರಯ್ಯನಹಳ್ಳಿ, ಎಂ. ತುಂಬರಗುದ್ದಿ-ಪೋ, ಚೂರನೂರು-ಹೋ. ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರ ದೊಡ್ಡಪ್ಪನ ಹೆಸರಿನಲ್ಲಿ ಯರಯ್ಯನಹಳ್ಳಿ ಗ್ರಾಮದ ಸರ್ವೇ ನಂ: 246/ಸಿ ರಲ್ಲಿ 7-20 ಎಕರೆ ಜಮೀನು, ಅದೇ ಗ್ರಾಮದ ಸರ್ವೇ ನಂ: 243 ರಲ್ಲಿ 2-16 ಎರಕೆ ಜಮೀನು, ಸರ್ವೇ ನಂ: 244 ರಲ್ಲಿ 2-3 ಎಕರೆ ಜಮೀನು ಒಟ್ಟು 11 ಎಕರೆ 39ಸೆಂಟ್ಸ್ ಜಮೀನಿದ್ದು, ದೂರುದಾರರ ದೊಡ್ಡಪ್ಪನ ಮರಣದ ನಂತರ ಸದರಿ ಜಮೀನಿನ ಖಾತೆಗಯನ್ನು ದೂರುದಾರರ ದೊಡ್ಡಮ್ಮ ಶ್ರೀಮತಿ ಭೀಮಕ್ಕ ರವರ ಹೆಸರಿನಲ್ಲಿ ಖಾತೆ ಪೌವತಿ ಮಾಡಿಸಿದ್ದು, ಸದರಿ ಜಮೀನನ್ನು ದೂರುದಾರರ ದೊಡ್ಡಪ್ಪನ ಮಕ್ಕಳು ಮತ್ತು ದೂರುದಾರರು ಮತ್ತು ಅವರ ಸಹೋದರರು ವಿಭಾಗ ಮಾಡಿಕೊಂಡಿದ್ದು, ಅದರಂತೆ ಪಹಣಿ ಮಾಡಿಕೊಡುವ ಬಗ್ಗೆ ಆ.ಸ.ನೌ.ರವರಾದ ನಿಮಗೆ ಶ್ರೀ.ಪಿ.ವಿ.ಪ್ರಕಾಶ್ ರವರ ಮೊಬೈಲ್‌ನಿಂದ ಮಾತನಾಡಿದಾಗ, ಆ.ಸಾ.ನೌ ರವರಾದ ನೀವು ರೂ. 9000/- ಗಳ ಲಂಚದ ಬೇಡಿಕೆ ಇಟ್ಟಿದ್ದು, ಸದರಿ ಸಂಭಾಷಣೆಯನ್ನು ಪಿ.ವಿ.ಪ್ರಕಾಶ್ ರವರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ದೂರುದಾರರು ಹಲವು ಬಾರಿ ಆ.ಸ.ನೌ.ರವರಾದ ನಿಮ್ಮನ್ನು ಪಹಣಿ ಮಾಡಿಕೊಡುವಂತೆ ಕೋರಿದ್ದು, ಆ.ಸ.ನೌ.ರವರಾದ ನೀದು ದೂರುದಾರರಿಂದ ಈಗಾಗಲೇ ಹಣ ಪಡೆದಿದ್ದರೂ ಸಹ ಹಾಗೂ ಪಿ.ವಿ.ಪ್ರಕಾಶ್ ರವರು ಹೇಳಿದರೂ ಸಹ, ಆ.ಸ.ನೌ.ರವರಾದ ನೀವು ಹಣವಿಲ್ಲದೆ ಕೆಲಸ ಮಾಡುವುದಿಲ್ಲವೆಂದು ದೂರುದಾರರಿಗೆ ಖಾತ್ರಿಯಾಗಿದ್ದುದರಿಂದ,

ದೂರುದಾರರು ಪಿ.ವಿ.ಪ್ರಕಾಶ್‌ರವರ ಜೊತೆ, ದಿನಾಂಕ: 02-03-2018 ರಂದು, ಪೊಲೀಸ್ ಉಪಾಧೀಕ್ಷಕರು, ಭ್ರಷ್ಟಾಚಾರ ನಿಗ್ರಹದಳ ಪೋಲಿಸ್ ಠಾಣೆ, ಬಳ್ಳಾರಿ, ಇಲ್ಲಿಗೆ ಹಾಜರಾಗಿ, ದೂರು ನೀಡಿರುತ್ತಾರೆ. ಸದರಿ ದೂರಿನನ್ವಯ ತನಿಖಾಧಿಕಾರಿಯವರು ದೂರನ್ನು ಮೊಕದಮೆ ಸಂ: 2/2018 ರಂತೆ ಭ್ರಷ್ಟಾಚಾರ ಕಾಯಿದೆ 1988, ಕಲಂ 7 ರನ್ವಯ ದಾಖಲು ಮಾಡಿಕೊಂಡಿರುತ್ತಾರೆ.

ಮುಂದುವರೆದು, ತನಿಖಾಧಿಕಾರಿಯವರು ಆ.ಸಾ.ನೌ.ರಾದ ನೀವು ಪಿ.ವಿ.ಪ್ರಕಾಶ್‌ರವರ ಜೊತೆ ಲಂಚದ ಹಣಕ್ಕೆ ಬೇಡಿಕೆ ಇಟ್ಟ ಸಂಬಂಧವಾಗಿ ಅವರ ಮೊಬೈಲ್‌ನಲ್ಲಿ ರೆಕಾರ್ಡ್ ಆಗಿದ್ದ ಸಂಭಾಷಣೆಯನ್ನು ಸಿ.ಡಿ.ಯಲ್ಲಿ ದಾಖಲಿಸಿ, ಸದರಿ ಸಂಭಾಷಣೆಯನ್ನು ಬಿ.ಮುರಳಿಕೃಷ್ಣ, ಕಂದಾಯ ನಿರೀಕ್ಷಕರು, ಸಂಡೂರು ಮತ್ತು ಸುಬ್ರಮಣ್ಯ, ಮಾಲಗಿ, ಗ್ರಾಮ ಲೆಕ್ಕಿಗರು, ಸಂಡೂರು, ಇವರುಗಳಿಗೆ ಕೇಳಿಸಿದ್ದು, ಸದರಿಯವರು ಸಿಡಿಯಲ್ಲಿ ಇದ್ದ ಸಂಭಾಷಣೆಯಲ್ಲಿನ ಧ್ವನಿಯನ್ನು ಆ.ಸಾ.ನೌ.ರಾದ ನಿಮ್ಮ ಧ್ವನಿಯಾಗಿರುವುದಾಗಿದೆ ಎಂದು ಗುರುತಿಸಿರುತ್ತಾರೆ. ಸಿಡಿಗಳಲ್ಲಿ ದಾಖಲಾದ ಸಂಭಾಷಣೆ ದೂರುದಾರರ ಹಾಗೂ ಆ.ಸಾ.ನೌ.ರವರಾದ ನಿಮ್ಮ ಮಾದರಿ ಧ್ವನಿಗೆ, ಹೋಲಿಕೆ ಇರುವುದಾಗಿ ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯಿಂದ ದೃಢಪಟ್ಟಿದೆ. ಈ ಮೂಲಕ ದೂರುದಾರರಿಂದ ಲಂಚದ ಹಣ ರೂ.9000/- ಗಳಿಗೆ ಬೇಡಿಕೆ ಇಟ್ಟಿದ್ದು, ಕರ್ತವ್ಯಲೋಪ ಎಸಗಿ ಸರ್ಕಾರಿ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) (i) ರಿಂದ (iii)ರಡಿಯಲ್ಲಿ ದುರ್ನಡತೆನ್ನೆಸಗಿರುತ್ತೀರಿ.

4. ವಿಚಾರಣಾಧಿಕಾರಿಯಾದ (ಅಪರ ನಿಬಂಧಕರು ವಿಚಾರಣೆಗಳು-11), ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಅನುಬಂಧ-1 ರಂತೆ ದೋಷಾರೋಪಣೆ ಮತ್ತು ಅನುಬಂಧ-2 ರಂತೆ ದೋಷಾರೋಪಣೆಯ ವಿವರಗಳು, ಅನುಬಂಧ-3 ರಂತೆ ಶಿಸ್ತು ಪ್ರಾಧಿಕಾರದ ಪರವಾಗಿ ವಿಚಾರಣೆ ಮಾಡಲು ಇಚ್ಚಿಸುವ ಸಾಕ್ಷಿದಾರರ ವಿವರಗಳು ಮತ್ತು ಅನುಬಂಧ-4 ರಂತೆ ಈ ವಿಚಾರಣೆಯಲ್ಲಿ ಹಾಜರುಪಡಿಸಲಿರುವ ದಾಖಲಾತಿಗಳ ವಿವರಗಳನ್ನೊಳಗೊಂಡಂತೆ ಸೂಚನಾ ಪತ್ರವನ್ನು ಆ.ಸ.ನೌಕರರಿಗೆ ಖುದ್ದು ಹಾಜರಾಗಬೇಕಾಗಿ ತಿಳಿಸುತ್ತಾ ಜಾರಿ ಮಾಡಲಾಗಿರುತ್ತದೆ. ದೋಷಾರೋಪಣೆ ಪಟ್ಟಿ ಜಾರಿಯಾದ ಪ್ರತಿಕ್ರಿಯೆಯಾಗಿ, ಆ.ಸ.ನೌಕರರು ದಿನಾಂಕ: 03/02/2023 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿದ್ದರು ಮತ್ತು ಆ.ಸ.ನೌಕರರ ಮೊದಲ ಮೌಖಿಕ ಹೇಳಿಕೆಯನ್ನು ಅದೇ ದಿನ ದಾಖಲಿಸಲಾಗಿದೆ. ಆ.ಸ.ನೌಕರರು ತಪ್ಪೊಪ್ಪಿಕೊಂಡಿಲ್ಲ ಮತ್ತು ಅದೇ ದಿನ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

13

5. ಆ.ಸ.ನೌಕರರು ಲಿಖಿತ ಹೇಳಿಕೆಯ ಜೊತೆಗೆ ಜಿಲ್ಲಾಧಿಕಾರಿಗಳು, ವಿಜಯನಗರ ಜಿಲ್ಲೆ, ಹೊಸಪೇಟೆ ರವರು ಹೊರಡಿಸಿರುವ ಆದೇಶ ಸಂಖ್ಯೆ:ಕಂ/ಸಿಬ್ಬಂದಿ–2/372/2019–20, ದಿನಾಂಕ: 03/09/2022ನ್ನು ಹಾಜರುಪಡಿಸಿರುತ್ತಾರೆ. ಸದರಿ ಆದೇಶದಲ್ಲಿ ಆ.ಸ.ನೌಕರರಾದ ಶ್ರೀ ಸಣ್ಣ ಮಾರೆಣ್ಣ, ಗ್ರಾಮಲೆಕ್ಕಿಗರು, ಯರ್ರಯ್ಯನಹಳ್ಳಿ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ ರವರ ವಿರುದ್ಧದ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆ ನಡೆಸಲು ತಹಶೀಲ್ದಾರ್, ಹಗರಿಬೊಮ್ಮನಹಳ್ಳಿ ತಾಲ್ಲೂಕು ಇವರನ್ನು ವಿಚಾರಣಾಧಿಕಾರಿಯಾಗಿ ಹಾಗೂ ತಹಶೀಲ್ದಾರ್, ಗ್ರೇಡ್–2, ಹಗರಿಬೊಮ್ಮನಹಳ್ಳಿ ತಾಲ್ಲೂಕು ಇವರನ್ನು ಮಂಡನಾಧಿಕಾರಿಯಾಗಿ ನೇಮಿಸಿರುವುದು ಕಂಡುಬರುತ್ತದೆ ಹಾಗೂ ಸದರಿ ದೋಷಾರೋಪಣಾ ಪಟ್ಟಿಯಲ್ಲಿರುವ ಆರೋಪಗಳು ಪ್ರಸ್ತುತ ಲೋಕಾಯುಕ್ತದಲ್ಲಿ ನಡೆಯುತ್ತಿರುವ ಆರೋಪಗಳು ಒಂದೇ ಆಗಿರುವುದು ಕಂಡುಬರುತ್ತದೆ.

6. ತಹಶೀಲ್ದಾರ್, ಹಗರಿಬೊಮ್ಮನಹಳ್ಳಿ ತಾಲ್ಲೂಕು ರವರು ಈಗಾಗಲೇ ಇಲಾಖಾ ವಿಚಾರಣೆಯನ್ನು ಪೂರ್ಣಗೊಳಿಸಿ, ದಿನಾಂಕ: 31/01/2023 ರಂದು ಜಿಲ್ಲಾಧಿಕಾರಿಗಳು, ವಿಜಯನಗರ ಜಿಲ್ಲೆ, ಹೊಸಪೇಟೆ ರವರಿಗೆ ಇಲಾಖಾ ವಿಚಾರಣಾ ವರದಿಯನ್ನು ಸಲ್ಲಿಸಿದ್ದು, ತದನಂತರ, ಶಿಸ್ತು ಪ್ರಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು, ವಿಜಯನಗರ ಜಿಲ್ಲೆ, ಹೊಸಪೇಟೆ ರವರು ದಿನಾಂಕ: 16/02/2023 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು ರವರಿಗೆ ವಿಚಾರಣಾ ವರದಿಯನ್ನು ಸಲ್ಲಿಸಿರುವುದು ತಿಳಿದುಬಂದಿರುತ್ತದೆ ಎಂದು ಅಭಿಪ್ರಾಯಿಸಿದ್ದಾರೆ.

7. ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಹಾಗೂ ಜಿಲ್ಲಾಧಿಕಾರಿಗಳು, ವಿಜಯನಗರ ಜಿಲ್ಲೆ, ಹೊಸಪೇಟೆ ರವರು ಹೊರಡಿಸಿರುವ ಆದೇಶ ಸಂಖ್ಯೆ:ಕಂ/ಸಿಬ್ಬಂದಿ–2/372/2019–20, ದಿನಾಂಕ: 03/09/2022ನ್ನು ಪರಿಶೀಲಿಸಲಾಗಿ, ಒಟ್ಟು ಸಂದರ್ಭಗಳ ಪರಿಗಣನೆಯ ಮೇಲೆ, ಆ.ಸ.ನೌಕರರಾದ ಶ್ರೀ ಸಣ್ಣ ಮಾರೆಣ್ಣ, ಗ್ರಾಮಲೆಕ್ಕಿಗರು, ಯರ್ರಯ್ಯನಹಳ್ಳಿ,

ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ ರವರ ವಿರುದ್ಧ ಈಗಾಗಲೇ ಜಿಲ್ಲಾಧಿಕಾರಿಗಳು, ವಿಜಯನಗರ ಜಿಲ್ಲೆ, ಹೊಸಪೇಟೆ ರವರು ಇಲಾಖಾ ವಿಚಾರಣೆಗಾಗಿ ಆದೇಶ ಹೊರಡಿಸಿದ್ದು, ತಹಶೀಲ್ದಾರ್, ಹಗರಿಬೊಮ್ಮನಹಳ್ಳಿ ತಾಲ್ಲೂಕು ಇವರನ್ನು ವಿಚಾರಣಾಧಿಕಾರಿಯಾಗಿ ಹಾಗೂ ತಹಶೀಲ್ದಾರ್, ಗ್ರೇಡ್-2, ಹಗರಿಬೊಮ್ಮನಹಳ್ಳಿ ತಾಲ್ಲೂಕು ಇವರನ್ನು ಮಂಡನಾಧಿಕಾರಿಯಾಗಿ ನೇಮಿಸಿರುತ್ತಾರೆ ಹಾಗೂ ಈಗಾಗಲೇ ತಹಶೀಲ್ದಾರ್, ಹಗರಿಬೊಮ್ಮನಹಳ್ಳಿ ತಾಲ್ಲೂಕು ರವರು ಈಗಾಗಲೇ ಇಲಾಖಾ ವಿಚಾರಣೆಯನ್ನು ಪೂರ್ಣಗೊಳಿಸಿ, ದಿನಾಂಕ: 31/01/2023 ರಂದು ಜಿಲ್ಲಾಧಿಕಾರಿಗಳು, ವಿಜಯನಗರ ಜಿಲ್ಲೆ, ಹೊಸಪೇಟೆ ರವರಿಗೆ ಇಲಾಖಾ ವಿಚಾರಣಾ ವರದಿಯನ್ನು ಸಲ್ಲಿಸಿದ್ದು, ತದನಂತರ, ಶಿಸ್ತು ಪ್ರಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು, ವಿಜಯನಗರ ಜಿಲ್ಲೆ, ಹೊಸಪೇಟೆ ರವರು ದಿನಾಂಕ: 16/02/2023 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು ರವರಿಗೆ ಇಲಾಖಾ ವಿಚಾರಣಾ ವರದಿಯನ್ನು ಸಲ್ಲಿಸಿರುವುದರಿಂದ, ಆ.ಸ.ನೌಕರರ ವಿರುದ್ಧ ಅದೇ ರೀತಿಯ ಆರೋಪಗಳ ಆಧಾರದ ಮೇಲೆ ಈ ವಿಚಾರಣೆಯನ್ನು ಈ ಸಂಸ್ಥೆಯು ಮುಂದಾಗುವಂತಿಲ್ಲ. ಆದ್ದರಿಂದ, ಆ.ಸ.ನೌಕರರಾದ ಶ್ರೀ ಸಣ್ಣ ಮಾರೆಣ್ಣ ರವರ ವಿರುದ್ಧದ ತ್ವರಿತ ಪ್ರಕ್ರಿಯೆಗಳು ಪರಿಗಣನೆಗೆ ಉಳಿಯುವುದಿಲ್ಲ.

> "ಆ.ಸ.ನೌಕರರಾದ ಶ್ರೀ ಸಣ್ಣ ಮಾರೆಣ್ಣ, ಗ್ರಾಮಲೆಕ್ಕಿಗರು, ಯರ್ರಯ್ಯನಹಳ್ಳಿ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರ ವಿರುದ್ಧ ಆರಂಭಿಸಿರುವ ವಿಚಾರಣೆಯನ್ನು ನಿಲ್ಲಿಸಬೇಕಾಗಿದೆ. ಜಿಲ್ಲಾಧಿಕಾರಿಗಳು, ವಿಜಯನಗರ ಜಿಲ್ಲೆ, ಹೊಸಪೇಟೆ ರವರು ಹೊರಡಿಸಿರುವ ಆದೇಶ ಸಂಖ್ಯೆ: ಕಂ/ಸಿಬ್ಬಂದಿ-2/372/2019-20, ದಿನಾಂಕ: 03/09/2022ರ ಪ್ರಕಾರ ಅದೇ ರೀತಿಯ ಆರೋಪಗಳನ್ನು ಈಗಾಗಲೇ ಪ್ರಾರಂಭಿಸಲಾಗಿದೆ ಮತ್ತು ತಹಶೀಲ್ದಾರ್, ಹಗರಿಬೊಮ್ಮನಹಳ್ಳಿ ತಾಲ್ಲೂಕು ರವರು ಈಗಾಗಲೇ ಇಲಾಖಾ ವಿಚಾರಣೆಯನ್ನು ಪೂರ್ಣಗೊಳಿಸಿ, ದಿನಾಂಕ: 31/01/2023 ರಂದು ಜಿಲ್ಲಾಧಿಕಾರಿಗಳು,

14

ವಿಜಯನಗರ ಜಿಲ್ಲೆ, ಹೊಸಪೇಟೆ ರವರಿಗೆ ಇಲಾಖಾ ವಿಚಾರಣಾ ವರದಿಯನ್ನು ಸಲ್ಲಿಸಿದ್ದು, ತದನಂತರ, ಶಿಸ್ತು ಪ್ರಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು, ವಿಜಯನಗರ ಜಿಲ್ಲೆ, ಹೊಸಪೇಟೆ ರವರು ದಿನಾಂಕ: 16/02/2023 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು ರವರಿಗೆ ಇಲಾಖಾ ವಿಚಾರಣಾ ವರದಿಯನ್ನು ಸಲ್ಲಿಸಿರುವುದರಿಂದ ಅದೇ ರೀತಿಯ ಆರೋಪಗಳ ಆಧಾರದ ಮೇಲೆ ಈ ವಿಚಾರಣೆಯನ್ನು ಈ ಸಂಸ್ಥೆಯು ಮುಂದಾಗುವಂತಿಲ್ಲ".

8. ಆದ್ದರಿಂದ, ತನಿಖಾ ವರದಿಯ ವರದಿಯನ್ನು ಸ್ವೀಕರಿಸಲು, ಜಿಲ್ಲಾಧಿಕಾರಿಗಳು, ವಿಜಯನಗರ ಜಿಲ್ಲೆ, ಹೊಸಪೇಟೆ ರವರು ಇಲಾಖಾ ವಿಚಾರಣೆಗಾಗಿ ಆದೇಶ ಹೊರಡಿಸಿದ್ದು, ತಹಶೀಲ್ದಾರ್, ಹಗರಿಬೊಮ್ಮನಹಳ್ಳಿ ತಾಲ್ಲೂಕು ಇವರನ್ನು ವಿಚಾರಣಾಧಿಕಾರಿಯಾಗಿ ಹಾಗೂ ತಹಶೀಲ್ದಾರ್, ಗ್ರೇಡ್–2, ಹಗರಿಬೊಮ್ಮನಹಳ್ಳಿ ತಾಲ್ಲೂಕು ಇವರನ್ನು ಮಂಡನಾಧಿಕಾರಿಯಾಗಿ ನೇಮಿಸಿ ಇದೇ ರೀತಿಯ ಆರೋಪಗಳ ಮೇಲೆ ಈಗಾಗಲೇ ವಿಚಾರಣೆಯನ್ನು ಆದೇಶ ಸಂಖ್ಯೆ: ಕಂ/ಸಿಬ್ಬಂದಿ–2/372/2019–20, ದಿನಾಂಕ: 03/09/2022 ರೀತ್ಯಾ ಆರಂಭಿಸಿರುವುದರಿಂದ ಮತ್ತು ತಹಶೀಲ್ದಾರ್, ಹಗರಿಬೊಮ್ಮನಹಳ್ಳಿ ತಾಲ್ಲೂಕು ರವರು ಈಗಾಗಲೇ ಇಲಾಖಾ ವಿಚಾರಣೆಯನ್ನು ಪೂರ್ಣಗೊಳಿಸಿ, ದಿನಾಂಕ: 31/01/2023 ರಂದು ಜಿಲ್ಲಾಧಿಕಾರಿಗಳು, ವಿಜಯನಗರ ಜಿಲ್ಲೆ, ಹೊಸಪೇಟೆ ರವರಿಗೆ ಇಲಾಖಾ ವಿಚಾರಣಾ ವರದಿಯನ್ನು ಸಲ್ಲಿಸಿದ್ದು, ತದನಂತರ, ಶಿಸ್ತು ಪ್ರಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು, ವಿಜಯನಗರ ಜಿಲ್ಲೆ, ಹೊಸಪೇಟೆ ರವರು ದಿನಾಂಕ: 16/02/2023 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು ರವರಿಗೆ ಇಲಾಖಾ ವಿಚಾರಣಾ ವರದಿಯನ್ನು ಸಲ್ಲಿಸಿರುವುದರಿಂದ, ಅದೇ ರೀತಿಯ ಆರೋಪಗಳ ಆಧಾರದ ಮೇಲೆ ಈ ವಿಚಾರಣೆಯನ್ನು ಈ ಸಂಸ್ಥೆಯು ಪೂರ್ವಭಾವಿಯಾಗಿ ಮಾಡಲಾಗುವುದಿಲ್ಲ. ಆದ್ದರಿಂದ, ಆ.ಸ.ನೌಕರರಾದ ಶ್ರೀ ಸಣ್ಣ ಮಾರೆಣ್ಣ, ಗ್ರಾಮಲೆಕ್ಕಿಗರು,

ಯರ್ರಯ್ಯನಹಳ್ಳಿ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ ರವರ ವಿರುದ್ಧದ ವಿಚಾರಣೆಯನ್ನು ಮುಕ್ತಾಯಗೊಳಿಸಲು ಸರ್ಕಾರಕ್ಕೆ ಈ ಮೂಲಕ ಶಿಫಾರಸು ಮಾಡಲಾಗಿದೆ.

9. ಸದರಿ ವಿಷಯದಲ್ಲಿ ತೆಗೆದುಕೊಂಡ ಕ್ರಮವನ್ನು ಈ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

ಸಂಬಂಧಪಟ್ಟ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿದೆ.

3/7/23

(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)
ಉಪಲೋಕಾಯುಕ್ತ–2,
ಕರ್ನಾಟಕ ರಾಜ್ಯ.

15